O.S.143/19
PW-1

**ದಿನಾಂಕಃ 02.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಪಿ ಎಸ್ ಕೆ ವಕೀಲರಿಂದಃ**

ನನ್ನ ತಂದೆ ತಾಯಿಗೆ ನಾನು, ಪಕೀರಪ್ಪ , ರುದ್ರವ್ವ ರವರು 3 ಜನ ಮಕ್ಕಳು ಇರುತ್ತೇವೆ. ದಾವಾ ಆಸ್ತಿಯು ತನ್ನ ತಂದೆ ಕ್ರಯಕ್ಕೆ ಪಡೆದಿರುವ ಅಸ್ತಿಯಾಗಿರುತತದೆ ದಾವಾ ಆಸ್ತಿ . ಸರ್ವೆ ನಂ. 91/6 ರಲ್ಲಿ ಒಟ್ಟು 3 ಎಕರೆ ಜಮೀನು ಇರುತ್ತದೆ. ಸದರಿ ಸ್ವತ್ತಿನಲ್ಲಿ ನಾನು ಪಕೀರಪ್ಪ , ರುದ್ರವ್ವ ರವರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ. ನನ್ನ ತಂದೆಯವರು ಜೀವಿತಾವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧ ಪಟ್ಟಂತೆ ವಿಲೇವಾರಿಗೆ ಸಂಬಂಧಪಟ್ಟಂತೆ ಯಾವುದೇ ಪತ್ರ ಬರೆದಿರುವುದಿಲ್ಲ. ಅವರು ನೊಂದಾಯಿತ ಪತ್ರ ವನ್ನು ಮಾಡಿರುವುದಿಲ್ಲ. ನನ್ನ ತಂದೆಯೂ ಪೌತಿಯಾದ ನಂತರ ನಾವು 3 ಜನ ಸರಳಪೌತಿ ವಾರಸುದಾರರಾಗಿರುತ್ತೇವೆ ಎಂದರೆಸರಿ. ಅದೇ ತರಹ ಈಗಲೂ ಸಹ ಪಹಣಿ ಪತ್ರಿಕೆಯಲ್ಲಿ ಜಂಟಿಯಾಗಿ ಹೆಸರು ನಮೂದು ಇ ರುತ್ತದೆ ಎಂದರೆಸರಿ. ಪಹಣಿ ಪತ್ರಿಕೆಯಲ್ಲಿ ಜಂಟಿ ಹಕ್ಕಿನಂತೆ ಇದ್ದು ಉಳುಮೆ ಮಾಡುತ್ತಿದ್ದೆವೆ ಎಂದರೆ ಸಾಕ್ಷಿಯೂ 30–40 ವರ್ಷದಿಂದ ರುದ್ರವ್ವರವರು ಜಮೀನು ಸಹ ನಾನೇ ಉಳುಮೆ ಮಾಡುತ್ತಿದ್ದೇನೆ. ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಿಸ್ಸೆ ಆಗಿಲ್ಲ . ನನ್ನ ತಂದೆಯವರು ಬದುಕಿದ್ದಾಗ ಹಾಗೂ ಪೌತಿಯಾದ ನಂತರ ರುದ್ರವ್ವ ರವರು ನಮ್ಮ ಇಬ್ಬರೊಂದಿಗೆ ಅನ್ಯೋನ್ಯವಾಗಿ ವಾಸವಾಗಿದ್ದರು ಎಂದರೆಸರಿ. ನಾವು ಕೂಡ ರುದ್ರವ್ವರೊಂದಿಗೆ ಅನ್ಯೋನ್ಯವಾಗಿ ಇದ್ದೆವು. ನನ್ನ ತಂದೆ ಜೀವಿತಾವಧಿಯಲ್ಲಿ ರುದ್ರವ್ವನ ಮದುವೆ ಮಾಡಿಕೊಟ್ಟಿರುತ್ತಾರೆ. ರುದ್ರವ್ವನನ್ನು ಬನವಾಸಿ ಗೆ ಮದುವೆ ಮಾಡಿಕೊಟ್ಟಿರುತ್ತಾರೆ . ಅವರಿಗೆ 2 ಜನ ಗಂಡು ಮಕ್ಕಳು, 2 ಹೆಣ್ಣು ಮಕ್ಕಳು ಹಾಗೂ ಅವರಲ್ಲಿ 3 ಜನ ತೀರಿಕೊಂಡು, ಒಬ್ಬ ಹೆಣ್ಣು ಮಗಳು ಮಾತ್ರ

ಜೀವಂತ ಇರುತ್ತಾರೆ. ದಾವಾ ಹೂಡುವ ಸಂದರ್ಭದಲ್ಲಿ ರುದ್ರವ್ವ ಜೀವಂತವಾಗಿದ್ದರು ಎಂದರೆಸರಿ. ಪ್ರಸ್ತುತ ದಾವೆಯಲ್ಲಿ ಅವರು ಕೂಡ ಅವಶ್ಯಕ ಪಕ್ಷಗಾರರು ಎಂದರೆ ಸರಿ. ಅವರನ್ನು ಪ್ರಸುತ್ತ ಪ್ರಕರಣದಲ್ಲಿ ಸೇರಿಸದೇಇ ರುವುದರಿಂದ ಕಾನೂನಿನಲ್ಲಿ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ರುದ್ರವ್ವ ಮತುತ ಅಣ್ಣ ಪಕೀರಪ್ಪ ರವರು 1 ಮತ್ತು 2 ನೇ ಶಾಲೆ ಗೆ ಹೋಗಿರುತ್ತಾರೆ. ಅವರು ಯಾವುದೇ ಕಾಲಕ್ಕೆ ಶಾಲೆಗೆ ಹೋಗಿರುವುದಿಲ್ಲ, ಅವರಿಗೆ ಓದು ಮತ್ತು ಬರೆಯಲು ಬರುತ್ತಿರಲಿಲ್ಲ ಎಂದರೆಸರಿಯಲ್ಲ. ರುದ್ರವ್ವ ರವರು ಈ ದಿನದಿಂದ 2-3 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡಿರುವಾಗ 100 ರಿಂದ 101 ವಯಸ್ಸಾಗಿತ್ತು . ಆ ಕಾಲಕ್ಕೆ ಅವರಿಗೆ ಒಬ್ಬರೇ ಓಡಾಡಲು ಆಗುತ್ತಿರಲಿಲ್ಲ ಎಂದಕರೆಸರಿಯಲ್ಲ. ಅವರಿಗೆ ಕಣ್ಣು ಸರಿಯಾಗಿ ಕಾಣುತ್ತಿರಲ್ಲಿ ಹಾಗೂ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ ಎಂದರೆಸರಿಯಲ್ಲ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**